


## ನಾರೀಕೇಳ ಫಲ!

ಬೆಂಗಳೂರಿನ ಗಿರಿನಗರದ ಕಾರ್ಯಸಿದ್ಧಿ ಆಂಜನೇಯ ಸ್ವಾಮಿ ದೇಗುಲವಿದೆ. ದೇಗುಲದ ಆವರಣದಲ್ಲಿ ಎತ್ತ ನೋಡಿದರೂ ತೆಂಗಿನಕಾಯಿಗಳ ತೋರಣ ಕಾಣಸಿಗುತ್ತದೆ. ಇಲ್ಲಿಗೆ ಹರಕೆಯೊಂದಿಗೆ ಬರುವ ಭಕ್ತರು ದೇಗುಲದ ಕಚೇರಿಯಲ್ಲಿ ದೊರೆಯುವ ಸಿಪ್ಪೆ ಸುಲಿಯದ ತೆಂಗಿನಕಾಯಿಯನ್ನು ತಂದು ಕಟ್ಟುತ್ತಾರೆ. ಹದಿನೈದು ದಿನಗಳ ನಂತರ ಅವರೇ ಬಂದು ಅದನ್ನು ಬಿಚ್ಚಿಕೊಂಡು ಹೋಗುತ್ತಾರೆ. ಅಷ್ಟರಲ್ಲಿ ಬೇಡಿಕೆ ಈಡೇರುತ್ತದೆ ಎಂಬುದು ಅವರ ನಂಬಿಕೆ. ಈ ನಂಬಿಕೆಗೆ ಈ ವರ್ಷದ ಮಾರ್ಚ್ ತಿಂಗಳಲ್ಲೇ ಅರವತ್ತೆರಡು ಸಾವಿರದ ಒಂಬೈನೂರು ತೆಂಗಿನಕಾಯಿಗಳನ್ನು ಇಲ್ಲಿ ಕಟ್ಟಿರುವುದು ಸಾಕ್ಷಿ. ಇವು ದೇಗುಲದ ಆವರಣ ಮತ್ತು ತೋಟಗಳಲ್ಲಿ ಬೆಳೆದ ನಾರೀಕೇಳಗಳು. ಇದರಿಂದ ದೇಗುಲಕ್ಕೆ ಬರುವ ಲಕ್ಷಾಂತರ ರೂಪಾಯಿ ಆದಾಯವನ್ನೂ ಆಡಳಿತ ಮಂಡಳಿಯು ವಿವಿಧ ಜನಪರ ಕಾರ್ಯಗಳಿಗೆ ಬಳಸಿಕೊಳ್ಳುತ್ತದೆ. ಭಕ್ತಿ, ಯುಕ್ತಿ, ಮುಕ್ತಿಗಳ ಸಂಗಮದಂತಿರುವ ಈ ವ್ಯವಸ್ಥೆ ದೇಗುಲದ ಆತ್ಮನಿರ್ಭರ ನೀತಿ ಇರಬಹುದೇ?

—ವಾ.ಮುರಳೀಧರ, ತೀರ್ಥಹಳ್ಳಿ



## ಬನ್ನಿ ವೃಕ್ಷಕ್ಕೆ ಸೀರೆ ಹೊದಿಕೆ

ಸೀರೆ ಮಹಿಳೆಯರು ಮಾತ್ರವೇ ಧರಿಸುತ್ತಾರಾ? ಇಲ್ಲ, ಹರಕೆ ಹೆಸರಲ್ಲಿ ಮರಗಳಿಗೂ ಸೀರೆಗಳನ್ನು ಉಡಿಸಲಾಗುತ್ತದೆ. ಅಂತಹದ್ದೇ ಒಂದು ದೃಶ್ಯ ಈ ಚಿತ್ರದಲ್ಲಿ ಕಾಣುತ್ತಿರುವುದು. ಚಿತ್ರದಲ್ಲಿ ಕಾಣುತ್ತಿರುವುದು ಬನ್ನಿ ವೃಕ್ಷ. ಮರಕ್ಕೆ ಕೆಳಗಿನಿಂದ ಮೇಲಿನವರೆಗೂ ಸೀರೆಗಳ ಹೊದಿಕೆ ಕಾಣುತ್ತವೆ. ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಹಂಪಾಪಟ್ಟಣ ಗ್ರಾಮದ ಮೂಲಕ ಭೀಮನಕೆರೆಗೆ ಹೋಗುವ ಮಾರ್ಗದಲ್ಲಿ ಈ ವೃಕ್ಷವಿದೆ. ಪಕ್ಕದಲ್ಲೇ ರೈಲ್ವೆ ಹಳಿಯೂ ಇದೆ. ಭಕ್ತಿಯ ಹೆಸರಿನಲ್ಲಿ ಪ್ರತಿ ತಿಂಗಳು ಹುಣ್ಣಿಮೆ ಮತ್ತು ವಿಶೇಷ ದಿನಗಳಲ್ಲಿ ಗಿಡಕ್ಕೆ ಸೀರೆ ಉಡಿಸುವುದು ಇಲ್ಲಿ ವಾಡಿಕೆಯಾಗಿದೆ.

ಬನ್ನಿ ವೃಕ್ಷಕ್ಕೆ ಭಕ್ತಿಯಿಂದ ಸೀರೆ ನೀಡಿದರೆ ಬೇಡಿಕೆಗಳು ಈಡೇರುತ್ತವೆ ಎನ್ನುವ ಅಪಾರ ನಂಬಿಕೆ ಭಕ್ತರದ್ದು. ಆಗಾಗ ಗಾಳಿಯಲ್ಲಿ ಸೀರೆಗಳು ಹಾರಿಹೋದರೂ, ಮರುದಿನದಂದೇ ಭಕ್ತರು ಬಂದು ಹಾಕುತ್ತಲೇ ಇರುತ್ತಾರೆ. ಹುಣ್ಣಿಮೆ ಮತ್ತು ವಿಶೇಷ ಹಬ್ಬಗಳ ಸಂದರ್ಭದಲ್ಲಿ ವೃಕ್ಷಕ್ಕೆ ಸೀರೆ ನೀಡಿ ಹರಕೆ ತೀರಿಸುವ ಮಹಿಳೆಯರ ಸಂಖ್ಯೆ ಹೆಚ್ಚುತ್ತಲೇ ಇರುತ್ತದೆ. ಇದಕ್ಕೆ ಇರಬೇಕು 'ಜನ ಮರುಳೋ, ಜಾತ್ರೆ ಮರಳೋ' ಅಂತ ಗಾದೆ ಇರೋದು!

—ಸಿ. ಶಿವಾನಂದ, ಹಗರಿಬೊಮ್ಮನಹಳ್ಳಿ



## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly